ಬಸ್ಸಿನ ಈ ಜಾಗವಲ್ಲ, ತಾನು ಕುಳಿತಿರುವುದು ಕಂಪನಾಳ ಜಾಗದಲ್ಲಿ... ಅವನ ಹೆಸರೇನು? 'ನಿನಾದ...' ಹೆಸರನ್ನು ಹಾಗೇ ಹೇಳಿಕೊಂಡರೆ ಎದೆಯೊಳಗಿನ ಮೌನವನ್ನೆಲ್ಲ ಕೊಡವಿ ಏನೋ ಜುಳು ಜುಳು ಸದ್ದನ್ನು ಆವಾಹಿಸಿಕೊಂಡ ಅವ್ಯಕ್ತ ಖುಷಿ. ಅವನು ಬರೆವ ಒಂದೊಂದು ಕವಿತೆಗಳೂ ಹೇಳಲಾಗದಷ್ಟು ಚಂದ. ಕತೆಗಳಂತೂ ಜೀವಂತ ದೃಶ್ಯಾವಳಿಗಳು. ಈ ಮಳೆ ನೋಡಿ ಅವನದೆಷ್ಟು ಬರೆಯಬಹುದು? ಆದರೆ ತನಗೆ ಈ ಜನ್ಮವೆಲ್ಲ ಪಟ್ಟು ಹಿಡಿದು ಕುಳಿತು, ಧ್ಯಾನ ಮಾಡಿದರೂ ಹಾಗೆ ಬರೆಯುವುದು ಸಿದ್ಧಿಯಾಗುವುದಿಲ್ಲ... ಹೊಳೆದ ಒಂದಷ್ಟು ಸಾಲುಗಳನ್ನು ಬರೆದರೆ ನಾನೇ ಓದಿದ ಯಾವುದ್ಯಾವುದೋ ಕವಿಗಳ ಕವಿತೆಗಳ ಸಾಲುಗಳನ್ನು ಮುರಿದು ಇಟ್ಟಂತೆ ಎನಿಸುತ್ತದೆ ಹೊರತೂ ನನ್ನದು ಎನಿಸುವುದಿಲ್ಲ... ಅವು ನನ್ನದೂ ಅಲ್ಲವೇ ಅಲ್ಲ. ಆದರೂ ನಿನಾದನ ಮನಸ್ಸಲ್ಲಿ ನಾನು ಒಂದೊಂದೇ ಸಾಲಾಗಿ ಇಳಿದಿದ್ದೀನಿ. ನಾನೇ ಅವನಾಗುತ್ತಿದ್ದೀನಿ. ನಾನಾ ಕಂಪನಾನಾ? ಅವನು ಪ್ರೀತಿಸುವುದು ನನ್ನನ್ನಾ ಅಥವಾ ಕಂಪನಾಳ ಸಾಲುಗಳನ್ನಾ? ಅಷ್ಟು ಹೊತ್ತಿಗೆ ಅವನ ಮೆಸೇಜ್ ಬಂದಿದ್ದರಿಂದ ಪ್ರಶ್ನೆಗಳ ಸಾಲು ನಿಂತಿತು.

'ಮಾತಾಡಲ್ವಾ? ಕೋಪಾನ?'

'ನೀನು ಬರಿತಿಯಾ ಅಂದ್ರೆ ಒಂದು ಕವಿಗೋಷ್ಠಿ ಇದೆ ಬ್ಯಾಂಗ್ಲೂರಲ್ಲಿ, ನಿನ್ ಹೆಸ್ರು ಕೊಡ್ಲಾ? ಒಳ್ಳೆ ಅವ್ಕಾಶ... ಹೆಸಿಟೇಷನ್ ಮಾಡ್ಕೊಬೇಡ.'

'ನೀನು ಬ್ಯಾಂಗ್ಲೂರ್ಗೆ ಬಂದ ಹಾಗಾಗತ್ತೆ, ದೊಡ್ಡ ದೊಡ್ಡ ಸಾಹಿತಿಗಳನ್ನ ಭೇಟಿಯಾದಾಗೆ ಆಗತ್ತೆ. ನಾನೂ ನೀನೂ ಮೀಟ್ ಮಾಡ್ದಾಗೂ ಆಗತ್ತೆ... ಎಷ್ಟೋ ವರ್ಷದ ಹಿಂದೆ ನೋಡಿದ್ದು ನಿನ್ನ. ಆಗ ನೀನು ಚೋಟು. ಆವತ್ತು ನೀನು ಬುಕ್ ಬಿಡುಗಡೆ ಫಂಕ್ಷನ್ನಿಗೆ ಬಂದಾಗ್ಲೂ ನಂಗೆ ಮಾತಾಡ್ಸೋಕೆ ಆಗ್ಲಿಲ್ಲಾ. ಬರ್ತೀಯಾ?'

ಕಿಟಕಿಯಿಂದ ಒತ್ತರಿಸಿಕೊಂಡು ಬರುತ್ತಿರುವ ತಂಪುಗಾಳಿ ಅವಳ ಮುಖದಲ್ಲಿ ಕಿತ್ತು ಬರುತ್ತಿರುವ ಬೆವರನ್ನು ನಿಲ್ಲಿಸಲಿಲ್ಲ. ನಡುಗುವ ಬೆರಳನ್ನು ಹೇಗೋ ಸಂಭಾಳಿಸಿಕೊಂಡು,

'ನಾನಾ? ಇಲ್ಲಪ್ಪಾ' ಎಂದು ಟೈಪಿಸಿ ಓರೆಗಣ್ಣಿಂದ ಪಕ್ಕದವನನ್ನು ನೋಡಿದಳು... ಅವನ ಕಣ್ಣುಗಳು ಅವಳ ಮೊಬೈಲ್ ಮೇಲಿದ್ದವು. ಅವಳಿಗೆ ಹಿಡಿಸಲಿಲ್ಲ. ಹೀಗೇ ಯಾರೋ ಮೊಬೈಲ್ ನೋಡುತ್ತಿದ್ದರೆ ಮೆಸೇಜ್ ಬರೆಯುವುದು ಹೇಗೆ... ಲಾಕ್ ಮಾಡಿ, ಕಿಟಕಿಯಾಚೆಗೆ ಕಣ್ಣು ನೆಟ್ಟಳು... ಬಸ್ಸು ಕೋಲ್ಸಿರ್ಸಿಯ ಗದ್ದೆಬಯಲಿನ ಪಕ್ಕೆಯಲ್ಲಿ ಹೋಗುತ್ತಿತ್ತು. ಹಸಿರು ಗದ್ದೆ, ಅಲ್ಲಲ್ಲಿ ನಿಂತ ಕಡು ಕೇಸರಿ ನೀರು, ಹಳದಿ ಡೆಫೋಡಿಲ್ಸ್ ಹೂಗಳು, ಗದ್ದೆಗಳ ನಡುವಿನ ಕೆಂಪು ಹಾದಿ... ತಣ್ಣಗೆ ಅಲ್ಲಿ ಅಲೆಯುತ್ತಿದ್ದರೆ... ಆಹಾ ಎಷ್ಟು ಚೆನ್ನಾಗಿರುತ್ತಿತ್ತು... ಈ ಸುಳ್ಳು, ಸಾಲು, ಪ್ರೀತಿ, ಗೀತಿ ಯಾವುದೂ ಬೇಡ... ಈ ನಿನಾದವೂ ಬೇಡ, ಕಂಪನವೂ ಬೇಡ. ನನ್ನೊಳಗಿನ ಅಚಲತೆ ನನ್ನನ್ನು ಗಟ್ಟಿಯಾಗೇ ಉಳಿಸಿದರೆ ಸಾಕು ಎಂದುಕೊಂಡಳು. ಕೋಲ್ಸಿರ್ಸಿಯನ್ನು ದಾಟಿ ಬಿದ್ರಕಾನಿನ ತಿರುವು ಮುರುವು ರಸ್ತೆಯಲ್ಲಿ ಬಸ್ಸು ನುಗ್ಗುತ್ತಿದ್ದರೆ ಗಾಳಿ ಎದೆಗೆ ಮತ್ತಷ್ಟು ತಂಪು ಒತ್ತಿ ನಗುತ್ತಿತ್ತು, ಮೋಡಗಳು ಮತ್ತೊಂದು ಮಳೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದವು. ಮೊಬೈಲ್ ಲಾಕ್ ತಗೆದು, ಆಗಲೇ ಟೈಪಿಸಿದ್ದನ್ನು ಕಳಿಸಿ ನಿಟ್ಟುಸಿರಿಡುವಾಗ ಮತ್ತೆ ಪಕ್ಕದಲ್ಲಿ ಕುಳಿತವ ಮೊಬೈಲ್ ನೋಡುತ್ತಿರುವುದು ನೋಡಿ ಜೋರು ಸಿಟ್ಟು ಬಂತು. ಯಾಕಾದರೂ ಇವನ ಚೀಲ ಸರಿಸಿ ಇಲ್ಲಿ ಕುಳಿತುಕೊಂಡೆನೊ? ಎಂದು ಬೇಸರಪಟ್ಟುಕೊಳ್ಳುತ್ತ ಅವನನ್ನೇ ದಿಟ್ಟಿಸಿದಳು...

ಕಪ್ಪು ಬಿಳಿ ಕೂದಲಿನ ಮಧ್ಯ ವಯಸ್ಸಿನ ಆ ವ್ಯಕ್ತಿ ತುಟಿಯೊಡೆದ...

'ಯಾವ್ಕಡೆ ಹೋಗೋರು?'